Regd No B G 135 Sri (52) 2 18-3-1955

ಸತ್ಯವಾದಿ

48 Year-
Satyavadi
DAILY
MYSORE 4

ಸಂಸ್ಥಾಪಕರು – ಅಂಮನೆ ಸಿರಸ್ಕೇದಾರ್ ಎಂ ಏ ಸುಬ್ಬರಾಯುರು ಸಂಪಾದಕರು – ಧರ್ಮಪ್ರಚಾರಸಂಕ ಎಂ ಎಸ್ ಕೃಷ್ಣರಾವ್ 2 ಪೈಸೆ

ಅಹಿಂಸಾ ಹುಲಿ

ಬೊಂಬಾಯಿ — ಒಂದು ಅಹಿಂಸಾ ಹುಲಿಯು ಬೊಂಬಾಯಿನ ಏರೀ ಕ್ಷೀರ ಕೇಂದ್ರದ ಪಕ್ಕದಲ್ಲಿದ್ದು ವಾತಾವರಣ ಅಥವಾ ಆಹಾರ ಪ್ರಾಣಿಯು ಮೇಲೂ ದಾಳಿ ಮಾಡಿಲ್ಲ. ಆದರೆ ಈ ಹುಲಿಯು ಹಿಂಸೆ ಕೊಟ್ಟಿಲ್ಲ.

❁

ಆತ್ಮಾರ್ಪಣೆ

ಪೆಟ್ಲಾಯಿದ — ಎಲ್.ಟಿ.ಸಿ ವಿನಲ್ಲಿ ಅನೇಕರಿಗೆ ಕಾರ್ಯವನ್ನು ಪ್ರತಿಭಟಿಸಿ 79 ವರ್ಷದ ಒಬ್ಬ ಮಹಿಳೆಯು ಒಂದು ಜನಸಂದಣಿ ಬೀದಿಯ ಪುಟಪಾತ್ ಮೇಲೆ ಬೆಂಕಿ ಹತ್ತಿಸಿಕೊಂಡು ಆತ್ಮಾರ್ಪಣೆ ಮಾಡಿದಳು.

❁

ಸರ್ಕಾರ ಒಪ್ಪಲಿಲ್ಲ

ತಿರುಪತಿ — ನವದೆಹಲಿಯಲ್ಲಿನ ಸ್ವಾಮಿ ಶಿವಾನಂದ ಸಾಂಸ್ಕೃತಿಕ ಸಂಘಕ್ಕೆ ಪಾರ್ಥನಾವಂದಿರ ಕಟ್ಟಲು ತಿರುಪತಿ-ತಿರುಮಲೈ ದೇವಸ್ಥಾನದವರು 5 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದ ಪ್ರಸ್ತಾವನೆಯನ್ನು ಆಂಧ್ರ ಸರ್ಕಾರ ರದ್ದು ಪಡಿಸಿತು.

★

ಪೌರ ಸಭೆ

ಮೈಸೂರು — ಪೌರಸಭೆಯ 62-63 ರ ಅಡಳಿತ ವರದಿ ಪರ್ಯಾಲೋಚನೆಗೆ ತಾ॥ 24 ಬುಧವಾರ ಮಧ್ಯಾಹ್ನ 4 ಗಂಟೆಗೆ ಸ್ಪೆಷಲ್ ಮೀಟಿಂಗು ಏರ್ಪಡಿಸಲಾಗಿದೆ.

★

ಶಾಲೆಯ ಪಂಚಾಂಗ

ದೈವಜ್ಞ ವಿಜಾವಣೆ

ಆಪ್ತವನುಹಾವಿದ್ವಾ ಧರ್ಮಾಧಿಕಾರಿ
ರಾಜಕಶಾಸ್ತ್ರಪಕ್ಕ, ಜ್ಯೋತಿರ್ವಿದ್ವನ್ಮಣಿ
ಪಂಪಕ್ಕ ಕೃಷ್ಣಜೋಯಿಸರವರಿಂದ

ಇಂದು ಶುಕ್ರವಾರ ಬಿದಿಗೆ ಚಿತ್ತ

ಭಾರತಕ್ಕೆ ಸಹಾಯ

ಪ್ಯಾರಿಸ್ — ಭಾರತಕ್ಕೆ ಸಹಾಯ ಸಂಸ್ಥೆಯು ಭಾರತಕ್ಕೆ ನೀಡುವ ನೆರವನ್ನು ಶೇಕಡ 20 ಹೆಚ್ಚಿಸುವನ್ನು ಇಲ್ಲಿ ಎಂಡು ದಿನ ಚರ್ಚಿಸಿ ಮುಂದಿನ ಪರ್ಯಾಲೋಚನೆಯನ್ನು ವಾಷಿಂಗ್ಟನ್ನಿನಲ್ಲಿ ಏಪ್ರಿಲ್ 21 ರಂದು ನಡೆಯಲಿದೆ — ಈ ಸಂಸ್ಥೆಯಿಂದ ಪ್ರಥಮ ನಾಲ್ಕು ವರ್ಷಗಳಲ್ಲಿ ಭಾರತವು 4445 ಮಿಲಿಯ ಡಾಲರುಗಳನ್ನು ಪಡೆದಿದೆಯೆಂದು ವರ್ಲ್ಡ್ ಬ್ಯಾಂಕಿನ ವಕ್ತಾರರೊಬ್ಬರು ಹೇಳಿದರು.

❁

ಲಾಮಾರ ಪ್ರವಾಸ

ನವದೆಹಲಿ — ದಲೈ ಲಾಮಾರು ಸಿಲೋನ್ನು, ಬರ್ಮಾ, ಕಾಂಬೋಡಿಯಾ, ಜಪಾನ್, ಥೈಲ್ಯಾಂಡು, ಮಲೇಷಿಯಾ ಫಿಲಿಪ್ಪೈನ್ಸ್‌ಗಳಿಗೆ ಬೇಟಿ ಕೊಡಬೇಕೆಂಬ ವಿಷಯದಲ್ಲಿ ಸರಕಾರದ ಸಮ್ಮತಿಯಿದೆ ಎಂದು ಲೋಕಸಭೆಯಲ್ಲಿ ವ್ಯಕ್ತಪಡಿಸಲಾಯಿತು.

★

ಆತ್ಮಾರ್ಪಣೆ

ರಂಗೂನ್ — ವುಂಥೋ ಪಟ್ಟಣದ ಪರ್ವತದಿಂದ ಮಾಂಗಥೇನು ಗಾಪ್ಪದ ಒಂದು ಗುಹೆಯಲ್ಲಿ 8 ತಿಂಗಳಿಂದ ಧ್ಯಾನಾಸಕ್ತನಾಗಿದ್ದ ಒಬ್ಬ ಬರ್ಮಾ ಸಾಧುವು ಬಟ್ಟೆಗೆ ಬೆಂಕಿಹತ್ತಿಸಿಕೊಂಡು ಬುದ್ಧ ದೇವನಿಗೆ ಆತ್ಮಾರ್ಪಣೆ ಮಾಡಿದನು; ಮುಂದಿನ ಲೋಕದಲ್ಲಿ ಬುದ್ಧದೇವನ ಪಕ್ಕ ಶಕ್ತಿಗೆ ಸ್ವಾಸನ ಸಿಕ್ಕಲು ಹೀಗೆ ಮಾಡಿದನು.

❁

ಚಿತ್ರೀಕರಣದವರಿಗೆ ಅಪಘಾತ

ಡಾಕಾ — ತಾಂಗೀಲು ಹತ್ತಿ ಚಿತ್ರೀಕರಣ ಪಾರ್ಟಿಯ ಜೀಪು ತಳಕಿಳಗಾಗಿ ಫೋಟೋಗ್ರಾಫರು ಸತ್ತು ಇತರರು ಗಾಯಗೊಂಡರು.

ಕೇರಳದಲ್ಲಿ ಅಧಿಕಾರ ಅತಂತ್ರ !

ತಿರುವನಂತಪುರಂ — ಕೇರಳದಲ್ಲಿ ರಾಷ್ಟ್ರಾಧ್ಯಕ್ಷರ ಅಡಳಿತವನ್ನೇ ಮುಂದುವರಿಸಲು ಕೇಂದ್ರ ಮಂತ್ರಿಮಂಡಲ ಶನಿವಾರ ತೀರ್ಮಾನಿಸಲು ಮಾಡುವ ನಿರೀಕ್ಷೆ ಇದೆ — ಮಂತ್ರಿಮಂಡಲ ರಚನೆಯಲು ಸಾಧ್ಯವಾಗಿಲ್ಲವೆಂದು ಗೌರ್ನರರು ಹಂಚಿಕೆಯೇ ಕಾರಣ.

❁

ಬ್ಯಾಂಕುಗಳ ರಾಷ್ಟ್ರೀಕರಣ

ತಿರುವನಂತಪುರಂ — ಡೆಲ್ಲಿ ಎಕನಾಮಿಕ್ಸ್ ಸ್ಕೂಲಿನ ಹಣಕಾಸಿನ ಅರ್ಥನೀತಿ ಪ್ರೊಫೆಸರ್ ಡಾ॥ ರಾಜ್‌ರವರು ಹಿರಿಯ ಬ್ಯಾಂಕ್ಗುಗಳ ರಾಷ್ಟ್ರೀಕರಣವಾಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

❁

ಕಟ್ಟೆ ಬಂಧನ

ಪಾಡರ್ಗಾಂಜ್ — ಅಖಿಲ ಭಾರತ ಹಿಂದೂಶಾಸ್ತ್ರ ವಾಟರ್ಸ್ ಕಾರ್ಯದರ್ಶಿ ಪಟ್ಟಾಭಿಪುರಂ ಭಾಷಾ ಸಮಸ್ಯೆ ವಿಷಯದಲ್ಲಿ ಭಾವೇಂವರ ಪೌನಾಕ್ಕು ಅಶ್ರಮದ ಮುಂದೆ ನಿರಶನ ಕೈಗೊಳ್ಳಲು ಬಂದು ಅಶ್ರಮ ಪ್ರವೇಶಿಸಲು ಯತ್ನಿಸಿದಾಗ ಪೊಲೀಸರು ಬಂಧಿಸಿ ಸ್ವಗಿರಿ ಮಾಡಲ್ಪಟ್ಟರು. ವಾರ್ಧಾಕ್ಕೆ ತರಲ್ಪಟ್ಟರು.

❁

ಶಾಸನ ಸಭೆಯಲ್ಲಿ

ಬೆಂಗಳೂರು — 22 ಲಕ್ಷ ಪಟ್ಟಣಿಗರು ಮತ್ತು 25 ಲಕ್ಷ ಗ್ರಾಮಸ್ಥರಿಗೆ 6 ತಿಂಗಳು ಆಹಾರ ಒದಗಿಸುವಷ್ಟು ಧಾನ್ಯ ಸಂಗ್ರಹ ಸೇರಿಸಲು ಸರಕಾರ ಪ್ರಯತ್ನಿಸುತ್ತಿದೆಯೆಂದು ಶಾಸನಸಭೆಯಲ್ಲಿ ನಿನ್ನೆ ತಿಳಿಸಲಾಯಿತು.

❁

ಬೆಂಗಳೂರು — ಸಾನಸನಿರೋಧ ನೀತಿಯು ಜಿನ್ನಾಗಿ ನಡೆಯುವಂತೆ ವಿರೋಧ ಪಕ್ಷದವರೂ ಸಹಕರಿಸಬೇಗಂದು ಶಾಸನ ಸಭೆಯಲ್ಲಿ ಗೃಹಮಂತ್ರಿಗಳು ಹೇಳಿದರು — ಈಗಿನ ಅಭಾವ ವರ್ಷ ಮುಂದಿನ ಪೀಳಿಗೆ ಕುಡಿತಕ್ಕೆ ಕೈಯಿಕ್ಕದಂತಾಗಿಸಬೇಕೆಂದೂ, ನಡೆಸಿದ ಒಂದು ಸರ್ವೆಯಲ್ಲಿ ಶೇಕಡ 7 ಮಾತ್ರ ಕುಡಿಯುತ್ತಿರುವುದಾಗಿ ಕಂಡುಬಂದಿದೆಯೆಂದೂ ತಿಳಿಸಿದರು.

★

ಬೆಂಗಳೂರು — ಮೈಸೂರು ಜೈಲಿನ ಡೆಪ್ಯೂಟಿ ಸೂಪರಿಂಟೆಂಡರಿಗೆ ಸುಖಭೋಜನ ದೊರೆಯುತ್ತಿರುವುದೆಂದೂ ಅಂತಹ ಆಹಾರವನ್ನು ಹೆಂಡತಿಯು ತಂತಾನೆ ಕಳುಹಿಸುವುದಿಲ್ಲವೆಂದೂ ಶಾಸನಸಭೆಯಲ್ಲಿ ಗೃಹಮಂತ್ರಿಗಳು ತಿಳಿಸಿದರು.

★

ಬೆಂಗಳೂರು — ಹಾಸನ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ವಿನಾಸನ ಸಾಲು ವಸ್ತ್ರಗಳ ಉತ್ಪಾದನೆಯನ್ನು ಸಿಸ್ಟೆ ಶಾಸನ ಸಭೆಯಲ್ಲಿ ತಿಳಿಸಲಾಯಿತು.

❁

ದ್ವಿಭಾಷಾ ಸೂತ್ರ

ಬೊಂಬಾಯಿ — ದ್ವಿಭಾಷಾ ಸೂತ್ರವೇ ಭಾಷಾ ಐಕ್ಯತೆಗೆ ಸಂಯುಕ್ತ ಮಾರ್ಗವೆಂದು ಸ್ವತಂತ್ರ ಪಕ್ಷದ ನಾಯಕ ಡಾ॥ ಮುನ್ಷಿ ಹೇಳಿದರು.

★

ಲಂಡನ್ — ಅರ್ಧ ಮಿಲಿಯ ಟೆಲಿಫೋನ್ ಪುಸ್ತಕವನ್ನು ಒಂದು ಕಂಪ್ಯೂಟರ್ ತಾಪ ಮಾಡಿದೆ; ಇದರಲ್ಲಿ ಭಾರತಕ್ಕೆ ಹಿಂದೂ ಸ್ವಾಗತ ಬಂದಿದ್ದು

ಮನು ಸಂಹಿತೆಯನ್ನು ಯಾರು ಅಗೌರವಿಸಿದರು ? ಮತ್ತು ಏಕೆ ?

★

ಈ ಕಾಲದಲ್ಲಿ ಜಹಿರಂಗವಾಗಿ ಹಿಂದೂಸಮಾಜವನ್ನು ತೆಗಳುವುದಲ್ಲದೆ ಅತ್ಯುತ್ತಮ ಧರ್ಮವಾದ, ಹಿಂದೂಧರ್ಮವೆಂದು ಪ್ರಸಿದ್ಧವಾಗಿರುವ, ವರ್ಣಾಶ್ರಮ ಧರ್ಮದ ಪಂಚಮ ತತ್ವಗಳನ್ನು ಅವಹೇಳನ ಮಾಡುವುದು ಫ್ಯಾಷನ್ ಆಗಿಬಿಟ್ಟಿದೆ ; ಲೋಕಭೆಯಲ್ಲಿ ಕೂಡ ಕೆಲವು ಸಹಸ್ಯರುಗಳು ಮಹತ್ವಪೂರ್ಣವಾಗಿ, ಹಿಂದೂಧರ್ಮಕ್ಕೆ ಅಪಚಾರವಾದ, ಅದರೆ ಅರ್ಥವಾಡಿಕೊಳ್ಳಲು ಕಷ್ಟಸಾಧ್ಯವಾದ ವಿಷಯಗಳಲ್ಲಿ ಕೋಪಗೊಂಡು, ಈ ಧರ್ಮದ ತತ್ವಾದಿವಿಷಯಗಳನ್ನು ಅವಹೇಳನ ಮಾಡಲು ಹೋಗುತ್ತಾರೆ : ಪ್ರಪಂಚದ ಐದನೇ ಒಂದು ಭಾಗ ಜನಸಂಖ್ಯೆಯನ್ನು ಹೊಂದಿರುವ ಧರ್ಮದ ವಿಷಯದಲ್ಲಿ ನಮ್ಮ ರಾಷ್ಟ್ರದಲ್ಲೇ ಇಂಥಾ ರೀತಿ ನಡೆ ನಡೆಯುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿಯಾಗಿದೆ ; ಈ ರೀತಿ ಅವಹೇಳನ ಮಾಡುವವರು, ಅನಾಗರೀಕ ಮಾರ್ಗದಲ್ಲಿ ಅಪಪ್ರಚಾರ ಮಾಡುವುದರಿಂದಲೂ, ಮನುಸಂಹಿತೆಯ ಗ್ರಂಥದ ಕೆಲವು ಶ್ಲೋಕಗಳನ್ನು ಹರಿದುಹಾಕುವುದರಿಂದಲೂ, ತಮ್ಮ ಗುಣವನ್ನು ಪ್ರದರ್ಶಿಸುತ್ತಾರೆ ; ಮನುಸಂಹಿತೆ ಗ್ರಂಥವು ಹೆಚ್ಚು ಕಡಮೆ ವೇದಕ್ಕೆ ಸಮಾನ ಗ್ರಂಥವಾದ್ದರಿಂದ, ಕ್ರಿಶ್ಚಿಯನ್ನರಿಗೆ ಬೈಬಲ್ ಎಷ್ಟು ಪವಿತ್ರವೋ, ಮುಸಲ್ಮಾನರಿಗೆ ಖುರಾನ್ ಎಷ್ಟು ಪವಿತ್ರವೋ, ಅಷ್ಟೇ ಮಟ್ಟಿಗೆ ಹಿಂದೂಗಳಿಗೆ ಮನುಸಂಹಿತೆಯು ಪವಿತ್ರವಾಗಿರುತ್ತದೆ ; ಮೇಲ್ನೋಟದ ರೀತಿಯಲ್ಲಿ ತಮ್ಮ ಸಂಗಾತಿಗಳು ಪ್ರಪಂಚದ ಅತ್ಯುಚ್ಚ ಪುಟ್ಟದ ಧರ್ಮವನ್ನು ಅವಹೇಳನೆ ಮಾಡಿದಾಗ, ಭಾರತದ ಗೌಂವಯುತರಾದ ಪಾರ್ಲಿಮೆಂಟು ಸಹಸ್ಯರು ಅವರ ಮೇಲೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೇ ಇದ್ದುದು ದುರ್ದೈವಕರ ಸಂಗತಿಯಾಗಿದೆ

ಮನು ಸಂಹಿತೆಯು ಪವಿತ್ರತೆಯುಳ್ಳದು ಮತ್ತು ಅತ್ಯುಚ್ಚ ಪುಟ್ಟದ ಅಧಾರ ಗ್ರಂಥವೆಂಬುದಕ್ಕೆ ಅಧಾರಗಳೇನು ? ಎಂಬುದನ್ನು ಪರಿಶೀಲಿಸೋಣ ; ಈಸಾಯಿಗಳು, ಮುಸ್ಲಿಮರು ಮತ್ತು ಇತರ ಕೆಲವು ಜಾತಿಗಳವರು ಅಥವಾ ಮತಕ್ಕೆ ಒಂದೇ ಪವಿತ್ರ ಗ್ರಂಥವನ್ನು ಹೊಂದಿರುತ್ತಾರೆ : ಈಸಾಯಿಗಳಿಗೆ ಬೈಬಲ್ ಒಂದೇ ಪವಿತ್ರ ಗ್ರಂಥ : ಹಾಗೆಯೇ ಮುಸ್ಲಿಂಗೆ ಖುರಾನ್ ಒಂದೇ ; ಆದರೆ ಹಿಂದೂಗಳಿಗೆ ಮೂರು ರೀತಿಯ ಗ್ರಂಥ ಸಮುಚ್ಚಯ ಪವಿತ್ರ ಅಧಾರ ಗ್ರಂಥಗಳಿವೆ ; ಯಾವ ಸಮಯದಲ್ಲಿಯಾದರೂ ವೇದವೇ ಪೂರ್ಣ ಅಧಾರವಾಗಿರುತ್ತ : ವೇದದಲ್ಲಿ ಸರಿಯಾದ ಸ್ಪಷ್ಟ ನಿರ್ದೇಶನ ದೊರಕದಿದ್ದಲ್ಲಿ ನಂತರ ಸ್ಮೃತಿಗಳು ಅಧಾರವಾಗಿರುತ್ತವೆ ; ವೇದ ಮತ್ತು ಸ್ಮೃತಿಗಳಲ್ಲಿ ದೊರಕದ ವಿಷಯಗಳಿಗೆ ಪುರಾಣಗಳು ಅಧಾರವೆಂದು ನಂಬಬೇಕು ; ಅಧಾರ ಕೊಡುವುದರಲ್ಲಿ ಪುರಾಣಗಳಿಗಿಂತ ಸ್ಮೃತಿಗಳು ಹೆಚ್ಚು ಎಂದು ತಿಳಿಯಬೇಕು- [ಸತ್ಯೇಷ]

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಪ್ರೊ|| ಕವೀಂದ್ರಕುಮಾರ್ ಸಿದ್ಧಾಂತ ಶಾಸ್ತ್ರಿ, ಎಂ ಎ, ಎಫ್ ಆರ್ ಎಸ್ ರವರ ಲೇಖನದಿಂದ ಸಂಗ್ರಹಿಸಿದ್ದು

ಅ. ಸ. ಅಯ್ಯಂಗಾರ್



ಗೋರಕ್ಷಣ ಪ್ರಾಣಿಪಯೂ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ 12-3-65 ರಿಂದ
ಶಿ ನ ಅವಿಚ್ಛಿನ್ನ ಪ್ರಾರಂಭ

ಬಿಡುಲ್ ಬಾಕ್ಸ್‌ಆಫೀಸ್ — ಮುಸಲೋಕಕ್ಕೆ ಹಿಂದಿ ಚಿತ್ರ

ಬೆನೆಜ್ಜೀರ್ BENAZIR

ಪಾತ್ರ- ಅಶೋಕ್‌ಕುಮಾರ್, ಮೀನಾಕುಮಾರಿ, ತಲಿಕಪೂರ್, ನಿರೂಪಂಚಾ ಕನ್ನಡ

ಪ್ರತಿದಿನ 3 ಪ್ರದರ್ಶನಗಳು

ಆಪೇರಾ— ಜನಪ್ರಿಯ 2 ನೇ ವಾರ

ನಾಗಪೂಜಾ (ಕನ್ನಡ)

ಪಾತ್ರಾಗಣ— ರಾಜಕುಮಾರ್, ಲೀಲಾವತಿ ಕಲ್ಯಾಣ್‌ಕುಮಾರ್, ರಾಘವೇಂದ್ರರಾವ್

ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI

SUDHA

A Superb Tonic

Help The Gorakshana

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ವಾತ್ಸಲ್ಯದಲ್ಲಿ, ಶಾಕಾಹಾರ್ಯಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 5ರೂ ಪೈಸೆ "ಗೋರಕ್ಷಣ" ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ನಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ- ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M S Krishna Rao
the Satyavadi Press Chamarajapuram Mysore 4